ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

ಸಿಸಿ 618/2017

| | | |
|---|---|---|
| ಸಾಕ್ಷಿದಾರರ ಹೆಸರು | -ಲಕ್ಷ್ಮಣ್ | ಚಾಸಾ-1 |
| ತಂದೆಯ ಹೆಸರು | -ಸಣ್ಣಯ್ಯ | ಫ್ರಾಸಾ-1 |
| ವಯಸ್ಸು | - 52 ವರ್ಷ | |
| ಉದ್ಯೋಗ | -ವ್ಯವಸಾಯ | |
| ವಾಸಸ್ಥಳ | -ಚನ್ನಸಂದ್ರ | |

ದಿನಾಂಕಃ- 28-06-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎಪಿಪಿ ರವರಿಂದಃ-**

ಚಾಸಾ-2 ರವರು ನನ್ನ ಹೆಂಡತಿ, ಚಾಸಾ-3 ರಿಂದ 6 ರವರು ನನಗೆ ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ. ಈ ಹಿಂದೆ ಆರೋಪಿತರು ಬಡ್ಡಿಗಾಗಿ ತಲಾ 1 ಲಕ್ಷ ರೂ ಹಣವನ್ನು 5 ಶೇಕಡ ಬಡ್ಡಿಯಂತೆ ನನಗೆ ನೀಡಿರುತ್ತಾರೆ. ಸದರಿ ಸಾಲದ ಹಣಕ್ಕೆ ಜಾಮೀನಿನ ರೂಪದಲ್ಲಿ 2 ಆನ್ ಡಿಮ್ಯಾಂಡ್ ಪ್ರನೋಟ್, ಶಿಂಶಾ ಬ್ಯಾಂಕ್ ನ 2 ಖಾಲಿ ಚೆಕ್ ಗಳಿಗೆ ಸಹಿ ಮಾಡಿ ಕೊಟ್ಟಿರುತ್ತೇನೆ. ನಂತರ ಅವರಿಂದ ಪಡೆದಿದ್ದ ಸಾಲದ ಹಣವನ್ನು ನನ್ನ ಜಮೀನನ್ನು ಮಾಡಿ, ಅವರ ಸಾಲವನ್ನು ನಾನು ತೀರಿಸಿರುತ್ತೆನೆ. ನಂತರ ಆರೋಪಿತರು ಇನ್ನು ಬಡ್ಡಿ ಹಣ ಕೊಡಬೇಕು ಎಂದು ಹೇಳಿ, ಹೆಚ್ಚಿಗೆ ಬಡ್ಡಿ ಹಣವನ್ನು ನೀಡುವಂತೆ ನಮ್ಮ ಮನೆಯ ಬಳಿ ಬಂದು ಕೇಳಿ, ನಮಗೆ ಕಿರುಕುಳ ನೀಡಿರುತ್ತಾರೆ. ಆಗ ನಾನು ಆರೋಪಿತರಿಗೆ ನೀಡಿರುವ ಆನ್ ಡಿಮ್ಯಾಂಡ್ ಪ್ರನೋಟ್ ಮತ್ತು ಚೆಕ್ ಗಳನ್ನು ನೀಡುವಂತೆ ಕೇಳಿದಾಗ ಆರೋಪಿತರು ಕಾರಣಗಳನ್ನು ಹೇಳಿಕೊಂಡು ಆನ್ ಡಿಮ್ಯಾಂಡ್ ಪ್ರನೋಟ್ ಗಳು ಎಂ ಕೆ ರಾಜಣ್ಣ ರವರ ಬಳಿ ಇರುತ್ತದೆ, ಆದ ಕಾರಣ ನನಗೆ ನೀಡಿರುವುದಿಲ್ಲ. ನಂತರ ಆರೋಪಿ 1 ಮತ್ತು 2 ರವರ ಮಗನ ಮುಖಾಂತರ ಚೆಕ್ ಗಳನ್ನು ಬಳಸಿಕೊಂಡು ನನ್ನ ಮೇಲೆ ಚೆಕ್ ಬೌನ್ಸ್ ಪ್ರಕರಣಗಳನ್ನು ದಾಖಲಿಸಿರುತ್ತಾರೆ. ನಂತರ ಆರೋಪಿತರ ಈ ಕೃತ್ಯದಿಂದ ಮತ್ತು ಅವರುಗಳು ಹೆಚ್ಚಿನ ಬಡ್ಡಿಗಾಗಿ ಹಣದ ವ್ಯವಹಾರ ಮಾಡಿರುವ ಬಗ್ಗೆ ಯಾವುದೇ ಪರವಾನಗಿ ಇರುವುದಿಲ್ಲ ಎಂದು ಮದ್ದೂರು ಪೊಲೀಸ್ ಠಾಣೆಗೆ ಬಂದು ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆ ದೂರು ಆಗಿದ್ದು, ಅದನ್ನು ನಿಪಿ-1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ನಂತರ ದಿ 11-07-2015 ರಂದು ಆರೋಪಿ 1 ರವರ ಮನೆಯಲ್ಲಿ ತನಿಖಾಧಿಕಾರಿಯಾದ ಪೊಲೀಸರು ನನ್ನ ಮತ್ತು ಚಾಸಾ-5, 6 ರವರ ಸಮಕ್ಷಮ ಬೆಳಗ್ಗೆ 9.00-10.00 ಗಂಟೆಯ ಸಮಯದಲ್ಲಿ ಮಹಜರ್ ಮಾಡಿರುತ್ತಾರೆ. ಆ ಸಮಯದಲ್ಲಿ 4 ಸಹಿ ಇರುವ ಆನ್ ಡಿಮ್ಯಾಂಡ್ ಪ್ರನೋಟ್ ಗಳು, 5 ಖಾಲಿ ಪ್ರನೋಟ್ ಗಳು, ಚೆಕ್ ಗಳು, ಒಂದು ಹಳೆಯ ಡೈರಿಯನ್ನು ಪೊಲೀಸರು ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆ ಸ್ಥಳ ಮಹಜರ್ ಆಗಿದ್ದು, ಅದನ್ನು ನಿಪಿ-2 ಎಂದು,

ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಸಹಿ ಮತ್ತು ಹೆಬ್ಬೆಟ್ಟಿನ ಗುರುತು ಇರುವ ಪ್ರನೋಟ್ ಗಳನ್ನು ನಿಪಿ-3 ರಿಂದ 7 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸ.ಸ.ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಎರಡನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,

ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ